| PW | 01 |
|---|---|

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಕ್ರಿಮಿನಲ್ ಅಪೀಲ್ ಸಂಖ್ಯೆ: 34/2024**

(ಮಧ್ಯಂತರ ಅರ್ಜಿ)

**ದಿನಾಂಕ: 10.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

**ಪಾಟೀ ಸವಾಲು: ಎದುರುದಾರರ ಪರ ವಕೀಲರಾದ ಕೆ.ಪಿ.ಬಿ. ವಕೀಲರಿಂದ:**

2. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಕೆ.ಆರ್.ಪುರಂ ಕ್ಯಾಲಸನಹಳ್ಳಿಯಲ್ಲಿ 5 ವರ್ಷದಿಂದ ವಾಸವಿರುತ್ತೇನೆ. ಸಾಕ್ಷಿಗೆ ಈ ದಿನ ನ್ಯಾಯಾಲಯಕ್ಕೆ ಏಕೆ ಬಂದಿದ್ದೀರಿ ಗೊತ್ತೆ ಎಂದರೆ ಸಾಕ್ಷಿಯು ಮೊದಲು ನನಗೆ ನ್ಯಾಯಾಲಯದಿಂದ ನೋಟಿಸ್ ಬಂದಿರಲಿಲ್ಲ ಆ ಕಾರಣದಿಂದ ನಾನು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ನನಗೆ ಪೊಲೀಸರು 2 ವರ್ಷಗಳ ಹಿಂದೆ ಕರೆ ಮಾಡಿದ್ದರು, ನೋಟಿಸ್ ನೀಡಿರಲಿಲ್ಲ. ಆಗ ನನಗೆ ಕೇಸಿನ ಬಗ್ಗೆ ಗೊತ್ತಾಯಿತು. ಆಗ ನಾನು ಸದರಿ ಪೊಲೀಸರನ್ನು ಕೇಳಿರುತ್ತೇನೆ, ಅದಕ್ಕೆ ಪೊಲೀಸರು ನನ್ನ ಹೆಂಡತಿಗೆ ರೂ. 7,000/- ಹಣ ಕೊಡಬೇಕೆಂದು ತಿಳಿಸಿರುತ್ತಾರೆ. ಅಂದರೆ ಈ ಪ್ರಕರಣ ದಾಖಲಿಸುವ 2

| PW | 01 |
|---|---|

ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ. ನಾನು ಈಗ ನನ್ನ ತಂದೆ ತಾಯಿಯೊಂದಿಗೆ ವಾಸವಿರುತ್ತೇನೆ. ಸಾಮಾನ್ಯವಾಗಿ ನಾನು ಕೆಲಸಕ್ಕೆ ಬೆಳಗ್ಗೆ 9.00 ರಿಂದ 10.00 ಗಂಟೆಯ ಮದ್ಯೆ ಕೆಲಸಕ್ಕೆ ಹೋಗಿ ಪುನಃ ಸಂಜೆ 5.00 ಗಂಟೆಗೆ ವಾಪಸ್ಸು ಬರುತ್ತೇನೆ. ಕೆಲವೊಮ್ಮೆ ಮನೆಯಲ್ಲಿಯೂ ಸಹ ಇರುತ್ತೇನೆ. ದಿ .03.11.2022 ರಂದು ನಾನು ಮನೆಯಲ್ಲಿದ್ದೆನು. ಸದರಿ ದಿನ ನಾನು ರಿಜಿಸ್ಟರ್ ಪೋಸ್ಟ್ ಪತ್ರವನ್ನು ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ನನ್ನ ತಂದೆ ತಾಯಿ ಸದರಿ ರಿಜಿಸ್ಟರ್ ಪೋಸ್ಟ್ ಪತ್ರವನ್ನು ಪಡೆದಿರಲಿಲ್ಲ, ಅವರಿಗೆ ತುಂಬಾ ವಯಸ್ಸಾಗಿದ್ದು ಅವರಿಗೆ ಗೊತ್ತಾಗುವುದಿಲ್ಲ.

3. ದಿ.05.04.2024 ರಂದು ಆ ನಂತರ ನಾನು ಗುಡಿಬಂಡೆ ನ್ಯಾಯಾಲಯದಲ್ಲಿ Crl Misc 342/2023 ರಲ್ಲಿ ಹಾಜರಾಗಿ ವಕೀಲರ ಮುಖಾಂತರ ವಕಾಲತ್ತನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಮತ್ತು ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗಿದ್ದೆವು ಎಂದರೆ ಸರಿ. ಅದೇ ದಿನ ನನ್ನ ಹೆಂಡತಿಯೂ ಸಹ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಧೀಶರು ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಮೌಖಿಕವಾಗಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದಿಂದ ನನಗೆ ಒಂದು ನೋಟಿಸ್ ಬಂದಿತ್ತು, ಅದಾದ ನಂತರ ಸೂಕ್ತ ವೇಳೆಯಲ್ಲಿ ಈ ನ್ಯಾಯಾಲಯಕ್ಕೆ

| PW | 01 |
|---|---|

ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ನಂತರ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು 2022 ರಲ್ಲಿ ನನ್ನ ಹೆಂಡತಿ Crl Misc 9/2022 ಕೇಸ್ ದಾಖಲಿಸಿರುವುದು ನನಗೆ ಗೊತ್ತಿದ್ದರೂ ನಾನು ನನ್ನ ಹೆಂಡತಿಗೆ ಆ ಬಗ್ಗೆ ಫೋನ್ ಮಾಡಿ ಕೇಳಿದ್ದೆ ಎಂದರೆ ಸರಿಯಲ್ಲ. ಅದೇ ಸಂದರ್ಭದಲ್ಲಿ ನನ್ನ ತಂದೆ ಕೂಡ ಉಪ್ಪಾರಹಳ್ಳಿಗೆ ಬಂದು ನನ್ನ ಹೆಂಡತಿ ಹಾಗೂ ಅವರ ಕುಟುಂಬದವರೊಂದಿಗೆ ರಾಜೀ ಪಂಚಾಯ್ತಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ: ಇಲ್ಲ</u>**

**(ದಿನಾಂಕ: 10.10.2025 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

| | |
|---|---|
| PW | 01 |

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**